# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ. ನಂ.992-2020** **ಪಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಪ್ರಭುಸ್ವಾಮಿ.ಎಸ್ ಬಿನ್ ಲೇ.ಸಂಗನವಸವಣ್ಣ<br>62 ವರ್ಷ<br>ವ್ಯವಸಾಯ<br>ಬದನವಾಳು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 04-07-2022. |

**ಮುಖ್ಯ ವಿಚಾರಣೆಃ ಶ್ರೀ ಕೆ.ಟಿ.ಆರ್ ವಕೀಲರಿಂದಃ**

**ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ಸತ್ಯದಿಂದ ಕೂಡಿದ್ದು ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.**

ಆರೋಪಿ ನನಗೆ ನೀಡಿದ ಚೆಕ್ ನಂ.323777 ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಅದರ ಮೇಲಿರುವ ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು, ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ದಿಃ12-11-2020 ರಂದು ನಾನು ವಕೀಲರ ಮೂಲಕ ಆರೋಪಿಗೆ ಕಳುಹಿಸಿದ ನೋಟಿಸ್‌ನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ನಿಪಿ-5 ಎಂದು ಗುರುತಿಸಲಾಯಿತು. ಆದುದರಿಂದ ನಾನು ಪಿರ್ಯಾದಿನಲ್ಲಿ ಕೋರಿರುವಂತೆ ಆರೋಪಿ ವಿರುದ್ದ ಸೂಕ್ತ ಆದೇಶ ಮಾಡಬೇಕಾಗಿ ಪ್ರಾರ್ಥನೆ.

(ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**